ಇಡೀ ಮನೆಯ ಅಲಂಕಾರ ಕಪ್ಪು ಬಿಳಿ ಬಣ್ಣಗಳ ಸಂಯೋಜನೆ. ಗೋಡೆಗೆ ಬಳಿದ ಬಿಳಿ ಬಣ್ಣ. ಅದನ್ನು ಬಿಟ್ಟರೆ ಮನೆಯಲ್ಲಿದ್ದ ಹೂಕುಂಡ, ಅಲಂಕರಣ, ಫರ್ನಿಚರ್, ಕಿಟಕಿಯ ಪರದೆ ಎಲ್ಲವೂ ಕಪ್ಪು. ಇಡೀ ಹಾಲಿನಲ್ಲಿ ಕೆಲವು ತಿರುವುಗಳಲ್ಲಿ, ಟೇಬಲ್, ಕುರ್ಚಿಗಳ ಪಕ್ಕದಲ್ಲಿ ಟೇಬಲ್ ಲ್ಯಾಂಪ್ ಮತ್ತು ಫೋಕಸ್ ಲ್ಯಾಂಪುಗಳಿದ್ದು, ಇಡೀ ಮನೆ ಸಣ್ಣಸಣ್ಣ ಬೆಳಕಿನ ದ್ವೀಪಗಳನ್ನು ಹೊಂದಿತ್ತು. ಎಲ್ಲೂ ಕಣ್ಣುಕುಕ್ಕುವ ಬೆಳಕಿಲ್ಲ. ಮನೆ ಯಾವುದೋ ಬೇರೆಯೇ ಲೋಕದಲ್ಲಿದ್ದು, ಹೊರಗಿನ ಪ್ರಪಂಚದಿಂದ ಬಿಡಿಸಿಕೊಂಡಂತೆ ಕಾಣುತ್ತಿತ್ತು. ಒಂದು ಮೂಲೆಯಲ್ಲಿದ್ದ ಮ್ಯೂಸಿಕ್ ಸಿಸ್ಟಂ, ಸ್ಪೀಕರ್. ಬಾಲ್ಕನಿಯ ತುಂಬಾ ತೂಗುಬಿಟ್ಟ ಗಿಡಗಳು, ಮಾಯಕದ ಪರಿಮಳವನ್ನು ಚೆಲ್ಲುತ್ತಿದ್ದ ಧೂಪದಾನಿ. ಆ ಮನೆ ಎಲ್ಲವನ್ನೂ ಎದುರಿಗಿಟ್ಟಂತಿದ್ದರೂ ಕಲ್ಯಾಣಿಯ ವೈಯಕ್ತಿಕ ಬದುಕನ್ನು ಕುರಿತು ಹೇಳಬಹುದಾದ ಯಾವುದೇ ಫೋಟೊ, ವಸ್ತು ಅಲ್ಲಿರಲಿಲ್ಲ. ಎಲ್ಲರೊಡನೆಯೂ ಆತ್ಮೀಯವಾಗೇ ಬೆರೆಯುತ್ತಿದ್ದ ಕಲ್ಯಾಣಿ ತನ್ನ ಬಗ್ಗೆ ಏನನ್ನೂ ಹೇಳಿಕೊಳ್ಳುತ್ತಿರಲಿಲ್ಲ. ಅಕಸ್ಮಾತ್ ಯಾರಾದರೂ ವೈಯಕ್ತಿಕ ಬದುಕಿನ ಬಗ್ಗೆ ಪ್ರಶ್ನೆ ಕೇಳಿದರೆ ನೋಡನೋಡುತ್ತಿದ್ದಂತೆ ಅವಳಿಗೂ ಎದುರಿಗಿದ್ದವರಿಗೂ ನಡುವೆ ಅವ್ಯಕ್ತ ತೆರೆಯೊಂದು ಬಿದ್ದು ಮೃದು ಮಾತುಗಳಲ್ಲಿ ಆಕೆ ವಿಷಯ ಬದಲಿಸುತ್ತಿದ್ದಳು. ಎದುರಿನವರಿಗೆ ಅನಂತರ ಏನೂ ಕೆದಕಿ ಕೇಳುವುದು ಸಾಧ್ಯವಾಗುತ್ತಿರಲಿಲ್ಲ. ಮಧುವಂತಿ ಟ್ರೂಥ್ ಅಂಡ್ ಡೇರ್ ಎಂದಾಗ ಕಲ್ಯಾಣಿಯ ಮನಸ್ಸಿನಲ್ಲಿ ಹಿಂಜರಿಕೆ ಶುರುವಾಗಿತ್ತು. ಮುಚ್ಚಿಡಬೇಕಾದ್ದನ್ನು ಪಣಕ್ಕಿಡುವ ಆಟ ಅವಳಲ್ಲಿ ಹೇಳಲಾರದ ಹೆದರಿಕೆ ಹುಟ್ಟಿಸುತ್ತಿತ್ತು.

ಎಲ್ಲರೂ ಟೀಪಾಯಿಯ ಸುತ್ತಲೂ ಕೂತರು. ಸಾವನಿ ಮೊಬೈಲ್ ಫೋನ್ ಪಕ್ಕದಲ್ಲೇ ಇಟ್ಟುಕೊಂಡಳು. 'ಇಲ್ಲಾದರೂ ಬಿಡಮ್ಮ ನಿನ್ನ ಮೊಬೈಲ್‌ನ' ಎಂದು ವಿಭಾವರಿ ಕಿಚಾಯಿಸಿದಳು. ಜಿಮ್‌ನಲ್ಲಿ ವ್ಯಾಯಾಮ ಮಾಡುವಾಗ ಸಹ ಫೋನ್ ಸಾವನಿಯ ಕಣ್ಣಳತೆಯಲ್ಲಿಯೇ ಇರಬೇಕು. ಅಷ್ಟರಲ್ಲಿ ಫೋನ್ ರಿಂಗ್ ಆಯಿತು. ಮೂವರು ನೋಡುತ್ತಿದ್ದಂತೆಯೇ ಸಾವನಿಯ ಮುಖ ಗಂಭೀರವಾಯ್ತು. ಸ್ವಲ್ಪ ದೂರ, ಬಾಲ್ಕನಿಗೆ ಹೋಗಿ ಫೋನ್ ಎತ್ತಿಕೊಂಡಳು. 'ಕಲ್ಯಾಣಿ ಮನೆಯಲ್ಲೇ...', 'ಇಲ್ಲ ಮಧು, ವಿಭಾ, ನಾನು', '........', 'ಎಲ್ಲರಿಗೂ ಹಾಯ್ ಹೇಳ್ತಾ ಇದಾರೆ...' ಎಂದು ಇವರ ಕಡೆಗೆ ಬಂದು, ಇವರು ಮಾತನಾಡಲೆಂದು ಫೋನ್ ಚಾಚಿದಾಗ ಕಲ್ಯಾಣಿಯ ಹುಬ್ಬುಗಳು ಒಂದು ಕ್ಷಣ ಗಂಟಾದವು. ಎಲ್ಲರೂ 'ಹಾಯ್' ಎಂದರು. ಅವರ ಧ್ವನಿ ಗಂಡನಿಗೆ ಕೇಳಿತು ಎನ್ನುವುದು ಖಾತ್ರಿಯಾದ ಮೇಲೆ ಸಾವನಿ 'ಬಾಯ್' ಹೇಳಿ, ಕರೆ ಕತ್ತರಿಸಿ ಬಾಲ್ಕನಿಯ ಆಚೆಗೆ ದಿಟ್ಟಿಸಿದಳು. ಬೆಳಕಿನ ಕಳಶ ಹೊತ್ತು ನರ್ತಿಸುತ್ತಿದ್ದ ಲಕ್ಷಾಂತರ ಮಿಂಚುಹುಳಗಳನ್ನು ತಂದು ಬಂಧಿಸಿಟ್ಟು ಅಲಂಕರಿಸಿದಂತೆ ಊರು ಹೊಳೆಯುತ್ತಿತ್ತು. ರೆಕ್ಕೆ ಕಳೆದುಕೊಂಡ ಮಿಂಚುಹುಳಗಳು ಈಗ ನಿಂತಲ್ಲೇ ಉರಿಯುತ್ತಿದ್ದವು. 'ಸಂಸಾರಸ್ಥ ಹೆಂಗಸರು ಮನೆಗೆ ಬರುವ ಸಮಯಾನಾ ಇದು?' ಮದುವೆ ಅನಂತರ ಮೊದಲ ನೃತ್ಯದ ಕಾರ್ಯಕ್ರಮ ಮುಗಿಸಿ, ಎರಡು ಗಂಟೆ ಪ್ರಯಾಣ ಮಾಡಿ, ಸುಸ್ತಾಗಿ ಸಾವನಿ ಮನೆಯೊಳಗೆ ಹೆಜ್ಜೆಯಿಟ್ಟಾಗ ತಡರಾತ್ರಿ. ಅವಳು ಒಳಗೆ ಹೆಜ್ಜೆಯಿಟ್ಟೊಡನೆ ಗಂಡ ಅಬ್ಬರಿಸಿದಾಗ ಅವಳಿಗೆ ಮೊದಲು ಆಗಿದ್ದು ಆಘಾತ, ಆಮೇಲೆ ಅವಮಾನ, ಸಿಟ್ಟು, ನೋವು. ಅವಳ ರಾಜೀವ, ಅವಳ ಮೆಚ್ಚಿನ ಸಂಗಾತಿ, ಜಗತ್ತನ್ನೇ ಬದಲಿಸುವ ಪ್ರಗತಿಪರ ಯೋಚನೆಗಳು, ಸಂಪ್ರದಾಯವನ್ನು ಮುರಿಯುವ ದಿಟ್ಟತನದ ಮಾತುಗಳಿಂದ ಅವಳನ್ನು ಸೆಳೆದಿದ್ದ, ವಯಸ್ಸಿನ ಅಂತರವನ್ನೂ ಮರೆಸಿ ವರಿಸಿದ್ದ ರಾಜೀವನೇ ಇದು? ಮನೆಯ ನೆಲಮಾಳಿಗೆಯಲ್ಲಿದ್ದ ಸ್ಟುಡಿಯೊಕ್ಕೆ ಸ್ನೇಹಿತ ಮತ್ತು ಸ್ನೇಹಿತೆಯರನ್ನು ಆಹ್ವಾನಿಸಿ ನಡುರಾತ್ರಿಯವರೆಗೂ ಹಾಡು, ಸಂಗೀತ, ಸಾಹಿತ್ಯ ಎಂದು ಚರ್ಚೆ ಮಾಡುತ್ತಿದ್ದವ, ಅದನ್ನು ತನ್ನ ಮಹಾಮನೆ ಎಂದು ಹೆಮ್ಮೆಯಿಂದ ಕರೆಯುತ್ತಿದ್ದ ರಾಜೀವನನ್ನು ಅಲ್ಲಿಗೆ ಬಂದು ಸೇರಿ, ತಡವಾಗಿ ಮನೆಗೆ ಹಿಂದಿರುಗುವ ಹೆಣ್ಣುಮಕ್ಕಳ ಗಂಡಂದಿರೂ